ಶ್ರೀ ಬಿ ಬಸವಲಿಂಗಪ್ಪ.—ಅವರು ಪ್ರಶ್ನೆ ಕೇಳಿದ್ದಾರೆ. ಉತ್ತರ ಕೊಡಿ. ಭಾಷಣ ಮಾಡಿದಿಟ್ಟು ಉತ್ತರ ಕೊಡುವುದಿಲ್ಲ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ ಸಮಾಧಾನವಾಗಿ ಇರಿ. ತಾವು ದಯವಿಟ್ಟು ಕಂಳಿತುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಕಿಲೋಮೀಟರ್ ಪ್ಯಾರಿಟಿ ಬಗ್ಗೆ ಇದುವರೆಗೆ ಆಗಿರತಕ್ಕಂಥ ಇಂಟರ್‌ಸ್ಟೇಟ್ ಅಗ್ರಿಮೆಂಟ್, ಕಿಲೋಮೀಟರ್ ಪ್ಯಾರಿಟಿ ಇರಲಿಲ್ಲ ಪಕ್ಕದ ರಾಜ್ಯಗಳು ಕಿಲೋಮೀಟರ್ ಪ್ಯಾರಿಟಿಗೆ ಒಪ್ಪುತ್ತಾ ಇರಲಿಲ್ಲ. ಡಿಸೆಂಬರ್ ತಿಂಗಳಲ್ಲಿ ನಡೆದ ಸಭೆಗೆ ಅಂತರ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ ಈ ಸರ್ಕಾರಗಳ ಪ್ರತಿನಿಧಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಬಂದಿದ್ದರು. ಸಭೆಯಲ್ಲಿ ಕಿಲೋಮೀಟರ್ ಪ್ಯಾರಿಟಿಗೆ ಒಪ್ಪಿಕೊಂಡಿದ್ದಾರೆ. ಕಿಲೋಮೀಟರ್ ಪ್ಯಾರಿಟಿ ಅಗ್ರಿಮೆಂಟ್ ಮಾಡಿರಲಿಲ್ಲ. ಬೇರೆ ರಾಜ್ಯಗಳೂ ಸಹಿತ ಒಪ್ಪಿಕೊಂಡಿರುವುದರಿಂದ, ನಮಗೆ ಇದರಿಂದ ಅನುಕೂಲವಾಗುತ್ತದೆ. ಕೆ.ಎಸ್.ಆರ್.ಟಿ.ಸಿಗೂ ಅನುಕೂಲವಾಗುತ್ತದೆಂದು ತಿಳಿದುಕೊಂಡಿದ್ದೇನೆ. ೧೫ ಕಿಲೋಮೀಟರ್ ಇಂಟರ್‌ಸ್ಟೇಟ್ ಒಳಗಡೆ ಯಾವಾಗ ಮಾಡುತ್ತೀರಿ ಎಂದು ಕೇಳಿದ್ದಾರೆ. ಎರಡು ಪಕ್ಕದ ರಾಜ್ಯ ಸರ್ಕಾರಗಳ ಜೊತೆ ಮಾತುಕತೆ ನಡೆಯುತ್ತಿದೆ. ಇದಕ್ಕೆ ನಿರ್ದಿಷ್ಟವಾದ ಸಮಯ ಹೇಳುವುದು ಕಷ್ಟವಾಗುತ್ತದೆ ಇದನ್ನು ಆದಷ್ಟು ಬೇಗ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಕಿಲೋಮೀಟರ್ ಪ್ಯಾರಿಟಿಯಲ್ಲಿ ೩೦೦ ಕಿ. ಮೀ. ಬಂದಿದೆ. ನನ್ನ ಲೆಕ್ಕಾಚಾರದ ಪ್ರಕಾರ ೩೦ ಕಿ.ಮೀ. ಮಾತ್ರ ಬಂದಿದೆ. ಇದರಿಂದ ನಮಗೆ ಮೋಸ ಆಗಿದೆ. ಇದನ್ನು ಆದಷ್ಟು ಬೇಗ ಸರಿಪಡಿಸಿ, ನಮ್ಮ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ—ಎಕ್ಸಿಸ್ಟಿಂಗ್ ಕಿಲೋಮೀಟರ್ ಪ್ಯಾರಿಟಿಯಿಂದ ನಮಗೆ ಡಿಸ್-ಅಡ್ವಾಂಟೇಜ್ ಇತ್ತು. ಬಸ್ ಪ್ಯಾರಿಟಿ ಕೇಳುತ್ತಿದ್ದೇವೆ. ಇದು ಆದ ಮೇಲೆ ಅನುಕೂಲವಾಗಬಹುದು.

ತರೀಕೆರೆ ತಾಲ್ಲೂಕಿನಲ್ಲಿ ಸಾಕಷ್ಟು ಬಸ್ಸು ಸೌಕರ್ಯವಿಲ್ಲದಿರುವುದು.

೧೫೭೭. **ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).**—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಸಾಕಷ್ಟು ಪ್ರಮಾಣದ ಬಸ್ಸು ಸೌಕರ್ಯವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ಬಗ್ಗೆ ಸ್ಥಳೀಯ ಶಾಸಕರು ಅನೇಕ ಮನವಿಗಳನ್ನು ಸಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಬಂದಿದೆ.

ಇ) ಸಾಧ್ಯವಾದ ಸಲಹೆಗಳ ಬಗ್ಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕ್ರಮ ತೆಗೆದುಕೊಂಡಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).— ಮಾನ್ಯ ಅಧ್ಯಕ್ಷರೇ, ಇವರ ಉತ್ತರವನ್ನು ನೋಡಿದರೆ, ಸಮುದ್ರದ ನಂಟು, ಆದರೆ ಉಪ್ಪಿಗೆ ಬರ, ಎಂಬಂತೆ ಬೆಂಗಳೂರು, ಹೊನ್ನಾವರಕ್ಕೆ ಬೇಕಾದಷ್ಟು ಬಸ್ ಇದ್ದರೂ ತರೀಕೆರೆಯಲ್ಲಿ ನಿಲ್ಲುವುದಿಲ್ಲ. ತರೀಕೆರೆ ತಾಲ್ಲೂಕಿನಲ್ಲಿ ಸಾಕಷ್ಟು ಬಸ್ ಸೌಕರ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ''ಬಂದಿದೆ'' ಎಂದೂ ಹೇಳಿದ್ದಾರೆ. ತರೀಕೆರೆ ಬಿ. ಹೆಚ್. ರೋಡಿನಲ್ಲಿದೆ. ಇಲ್ಲಿ ಹೆಚ್ಚು ಬಸ್ಸುಗಳ ಅನುಕೂಲವಿಲ್ಲದೆ,

ರೈತರಿಗೆ, ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂದು, ಒಂದು ವರ್ಷದಲ್ಲಿ ೨೬ ಮನವಿಗಳನ್ನು, ಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಇಲಾಖೆಗಳಿಗೆ ಕೊಟ್ಟಿದ್ದೇನೆ. ಆದರೆ ನನ್ನ ಆತ್ಮೀಯ ಸಚಿವರು ಇಲ್ಲಿವರೆಗೂ ಒಂದನ್ನೂ ಸಹ ಈಡೇರಿಸಿಲ್ಲ, ಈಡೇರಿಸುತ್ತಾರೆ, ಯಾವಾಗ ಈಡೇರಿಸುತ್ತಾರೆಂದು ಭರವಸೆ ಇಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಮತ್ತೊಮ್ಮೆ ವಿಶೇಷವಾದ ಸೂಚನೆಯ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.— ತಾವು ನೇರವಾದ ಪ್ರಶ್ನೆಯನ್ನು ಕೇಳಿ.

ಶ್ರೀ ಬಿ. ಆರ್. ನೀಲಕಂಠಪ್ಪ.— ಬೀರೂರಿನಿಂದ ಬಾಣಾವಾರಕ್ಕೆ ಒಂದು ಲೋಕಲ್ ಬಸ್ಸನ್ನು ಓಡಿಸುವುದಕ್ಕೆ ಹೇಳಿದ್ದೆ. ಇದರಿಂದ ವಿದ್ಯಾರ್ಥಿಗಳಿಗೆ, ರೈತರಿಗೆ ಅನುಕೂಲವಾಗುತ್ತದೆ. ೬ ಕಿ. ಮೀಟರ್‌ನಿಂದ ೧೦ ಕಿ. ಮೀಟರ್ ವರೆಗೆ ಹಾಗೂ ೧೦ ಕಿಲೋಮೀಟರ್ ದಾಟಿದ ಮೇಲೆ ಇರತಕ್ಕ ಸ್ಟೇಜನ್ನು ಸರಿಪಡಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಪಿ. ಜಿ ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರಾದ ನೀಲಕಂಠಪ್ಪನವರು, ತಾವು ಸಾರಿಗೆ ಇಲಾಖೆಯ ಜವಾಬ್ದಾರಿಯನ್ನು ಹೊತ್ತಮೇಲೆ ಒಂದೆರಡು ಪತ್ರಗಳನ್ನು ಬರೆದರು, ಅವರ ಕ್ಷೇತ್ರದ ನಾಲ್ಕೈದು ಸಲಹೆಗಳನ್ನು ಹೇಳಿದ್ದಾರೆ. ತರೀಕೆರೆ, ಚಿಕ್ಕಮಗಳೂರು ಕಡೆಗಳಲ್ಲಿ ಖಾಸಗಿ ಬಸ್ಸುಗಳನ್ನು ಓಡಿಸುತ್ತಿರುವುದರಿಂದ. ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಖಾಸಗಿ ಬಸ್ಸಿನವರ ರೋಡುಗಳನ್ನು ನಾವು ಎನ್‌ಕ್ರೋಚ್ ಮಾಡುವುದಕ್ಕಾಗುವುದಿಲ್ಲ. ಅವರು ೨೩ ಪತ್ರ ಬರೆದಿದ್ದೇನೆ, ಒಂದು ಸಹ ಇಂಪ್ಲಿಮೆಂಟ್ ಮಾಡಿಲ್ಲ ಎನ್ನುವುದನ್ನು ಒಪ್ಪುವುದಿಲ್ಲ. ಅವರು ಹೇಳಿರುವಂತೆ ಕಡೂರು, ಕೊಡ್ಲೂರು, ಭದ್ರಾವತಿ ಮಾರ್ಗವಾಗಿ ೪-೫ ಟ್ರಿಪ್ ಓಡಿಸಲಾಗುತ್ತಿದೆ.

ಬಿಡ್ಡಿಹಳ್ಳಿ, ಕಂಬದಹಳ್ಳಿ ಈ ಕಡೆಗೆ ಎಕ್ಸ್‌ಪ್ರೆಸ್ ಹಾಕಬೇಕೆಂದು ಹೇಳಿದ್ದಾರೆ, ಅದನ್ನೂ ಕೂಡ ಮಾಡಿದ್ದೇವೆ. ಮುಖ್ಯವಾಗಿ ಅವರಿಗಿರಕ್ಕಂಥಾದ್ದು ಕೆಲವು ಲಾಂಗ್ ರೂಟ್ ಎಕ್ಸ್‌ಪ್ರೆಸ್ಸನ್ನು ನಿಲ್ಲಿಸಿ ಎಂದು ಕೇಳಿದ್ದಾರೆ. ಅದು ಸ್ವಲ್ಪ ಕಷ್ಟವಾಗುತ್ತದೆ. ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಮಾನ್ಯ ಸದಸ್ಯರು ಹೇಳಿರುವಂಥಾದ್ದನ್ನು ಹಾಗೂ ಜಿಲ್ಲೆಯ ಶಾಸಕರು ಹೇಳುವುದನ್ನೂ ಅವರನ್ನು ಭೇಟಿ ಮಾಡಿ ತೀರ್ಮಾನ ತೆಗೆದು ಕೊಳ್ಳುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.— ಬಿ. ಹೆಚ್. ರೋಡಿನಲ್ಲಿ ಖಾಸಗಿ ಬಸ್ಸುಗಳು ಓಡುತ್ತಾ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಕೆ.ಎಸ್.ಆರ್.ಟಿ.ಸಿ. ಬಸ್ಸುಗಳನ್ನೂ ನಿಲ್ಲಿಸುವುದು ಕಷ್ಟ.

ಹೊಸದುರ್ಗದಲ್ಲಿ ರೇಷ್ಮೆ ತೋಟವನ್ನು ಸ್ಥಾಪಿಸುವ ಬಗ್ಗೆ

೧೬೪. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಮಾನ್ಯ ರೇಷ್ಮೆ ಖಾತೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ರೇಷ್ಮೆ ಇಲಾಖೆಯಿಂದ ರೇಷ್ಮೆ ಫಾರಂ ಸ್ಥಾಪಿಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ ?

ಆ) ಹಾಗಿದ್ದಲ್ಲಿ ಇದಕ್ಕಾಗಿ ನೀಡಿದ ಹಣವನ್ನು ಸಕಾಲದಲ್ಲಿ ಬಳಸಿಕೊಳ್ಳದಿರುವುದರಿಂದ ಸರ್ಕಾರದವರು ವಾಪಸ್ಸು ಪಡೆದದ್ದು ನಿಜವೇ ?

ಇ) ರೇಷ್ಮೆ ಇಲಾಖೆಯಿಂದ ಬಡ ರೇಷ್ಮೆ ಬೆಳೆಗಾರರಿಗೆ ನೀಡುವ ಸೌಲಭ್ಯಗಳು ಸರಿಯಾಗಿ ದೊರೆಯುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ಖಾತೆಯ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.